**ಸಾಕ್ಷಿಯನ್ನು ದಿನಾಂಕ 12.02.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ–**

**ಪಾಟೀಸವಾಲು– ಎದುರುದಾರರ ಪರ ಶ್ರೀ ಎಚ್.ಬಿ.ಎಸ್ ವಕೀಲರಿಂದಃ–**

1. O.S.No.22/2006 ದಾವೆಯಲ್ಲಿ ತಹಸಿಲ್ದಾರ್, ಜಿಲ್ಲಾ ಅಧಿಕಾರಿಗಳು, ಕಾರ್ಯದರ್ಶಿಗಳು ಇಲವಾಲ್ ಗ್ರಾಮ ಪಂಚಾಯ್ತಿ, ಮುಖ್ಯ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯದರ್ಶಿಗಳು ರಾಜ್ಯ ಸರ್ಕಾರ ಇವರ ವಿರುದ್ಧ ಸಲ್ಲಿಸಲಾಗಿತ್ತು ಎಂದರೆ ಸರಿ. ದಾಖಲಾತಿಗಳ ಆದಾರದ ಮೇಲೆ ನನಗೆ ಮಾಹಿತಿ ಇದೆ ಎಂದರೆ ಸರಿ. 2006 ನೇ ಸಾಲಿನಲ್ಲಿ ನಾನು ಇಲವಾಲ್ ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತಿರಲಿಲ್ಲ ಅದೇ ಕಾರಣ ಸದರಿ ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ O.S.No.22/2006 ಆದೇಶದ ವಿರುದ್ಧ RA No.283/2019 ಸಲ್ಲಿಸಿದ್ದಾರೆ ಎಂದು ಮಾಹಿತಿ ಇದೆ. ದಿಃ 21.11.2017 ರಂದು RA No.173/2017 ಸಲ್ಲಿಸಲಾಗಿತ್ತು ಮತ್ತು ಸದರಿ ಅಪೀಲು ವರ್ಗಾವಣೆ ಆದ ನಂತರ RA No.283/2019 ಆಗಿದೆ ಎಂದರೆ ಸರಿ. 1700 ಕ್ಕೂ ಅಧಿಕ ಕಾಲವಿಳಂಬ ಆಗಿದೆ ಎಂದರೆ ಸರಿಯಲ್ಲ. ನಾವು ಉದ್ದೇಶ ಪೂರ್ವಕವಾಗಿ ಕಾಲವಿಳಂಬ ಮಾಡಿ ಮೇಲ್ಮನವಿಯನ್ನು ಸಲ್ಲಿಸಲಾಗಿದೆ ಮತ್ತು ಸೂಕ್ತ ಕಾರಣ ತಿಳಿಸಿಲ್ಲ ಎಂದರೆ ಸರಿಯಲ್ಲ. ನಾನು ಅರ್ಜಿಯಲ್ಲಿ ಕೇಳಿದ ಪರಿಹಾರಕ್ಕೆ ಅರ್ಹ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ :–ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ ಎ ಒ.,**

**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,**
**ಮೈಸೂರು.**

**MVC – /20**
**PW 01**